# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01. | ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : 1024 |
| 02. | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| 03. | ಉತ್ತರಿಸುವ ದಿನಾಂಕ | : 21.09.2021 |
| 04. | ಉತ್ತರಿಸುವ ಸಚಿವರು. | : ಮಾನ್ಯ ಗೃಹ ಸಚಿವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರ ಮೇಲೆ ಜರುಗಿರುವ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು;</td><td>ರಾಜ್ಯದಲ್ಲಿ 2019, 2020 ಮತ್ತು 2021 (ಆಗಸ್ಟ್31ರ ವರೆಗೆ) ದಾಖಲಾದ ಮಹಿಳೆಯರ ಮೇಲೆ ಜರುಗಿರುವ ಅಪರಾಧ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ.
<table>
<tr><th>ಅಪರಾಧ ಶೀರ್ಷಿಕೆ</th><th>2019</th><th>2020</th><th>2021 (ಆಗಸ್ಟ್ 31)</th></tr>
<tr><td>ಅತ್ಯಾಚಾರ</td><td>496</td><td>480</td><td>350</td></tr>
<tr><td>ವರದಕ್ಷಿಣೆ ಸಾವು</td><td>192</td><td>175</td><td>109</td></tr>
<tr><td>ವರದಕ್ಷಿಣೆ ಕಿರುಕುಳ</td><td>2437</td><td>2033</td><td>1457</td></tr>
<tr><td>ಲೈಂಗಿಕ ದೌರ್ಜನ್ಯ</td><td>4758</td><td>4540</td><td>3154</td></tr>
<tr><td>ಡಿಪಿ ಕಾಯ್ದೆ</td><td>1781</td><td>1529</td><td>1054</td></tr>
</table>
</td></tr>
<tr><td>ಆ)</td><td>ಮಹಿಳೆಯರ ವಿರುದ್ಧದ ಅಪರಾಧಗಳ ವ್ಯಾಪಕ ಬೆದರಿಕೆಯನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td rowspan="2">ಮಹಿಳೆಯ ಮೇಲಿನ ಅತ್ಯಾಚಾರ & ದೌರ್ಜನ್ಯದ ವಿವಿಧ ಅಪರಾಧ ಪ್ರಕರಣಗಳಲ್ಲಿ ಬಂಧಿಸಿರುವ ಆರೋಪಿಗಳ ಸಂಖ್ಯೆಯು ಈ ಕೆಳಕಂಡಂತಿದೆ.
<table>
<tr><th>ಅಪರಾಧ ಶೀರ್ಷಿಕೆ</th><th>2019</th><th>2020</th><th>2021 (ಆಗಸ್ಟ್ 31)</th></tr>
<tr><td>ಅತ್ಯಾಚಾರ</td><td>844</td><td>852</td><td>630</td></tr>
<tr><td>ವರದಕ್ಷಿಣೆ ಸಾವು</td><td>434</td><td>476</td><td>215</td></tr>
<tr><td>ವರದಕ್ಷಿಣೆ ಕಿರುಕುಳ</td><td>4101</td><td>3369</td><td>1966</td></tr>
<tr><td>ಲೈಂಗಿಕ ದೌರ್ಜನ್ಯ</td><td>9919</td><td>10334</td><td>5859</td></tr>
<tr><td>ಡಿಪಿ ಕಾಯ್ದೆ</td><td>4868</td><td>3983</td><td>2217</td></tr>
</table>
<u>ಮಹಿಳೆಯರ ಮೇಲಿನ ಅತ್ಯಾಚಾರ & ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟುವ ಸಂಬಂಧ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.</u><br>
➢ ಅತ್ಯಾಚಾರ, ಪೋಕ್ಸೋ ಪ್ರಕರಣಗಳ ತನಿಖೆಯನ್ನು ಅಪರಾಧ ಕಾನೂನು ತಿದ್ದುಪಡಿ ಸುಗ್ರೀವಾಜ್ಞೆ, 2018, ರಲ್ಲಿನ ತಿದ್ದುಪಡಿಯಂತೆ ನಿಗದಿಪಡಿಸಿರುವ 60 ದಿನಗಳ ಕಾಲಮಿತಿಯಲ್ಲಿ ತನಿಖೆಯನ್ನು ಪೂರ್ಣಗೊಳಿಸಲು ಸುತ್ತೋಲೆಯನ್ನು ಹೊರಡಿಸಲಾಗಿದೆ.</td></tr>
<tr><td>ಇ)</td><td>ಹಾಗಿದ್ದಲ್ಲಿ ಅದರ ವಿವರಗಳೇನು?</td></tr>
</table>

| | | | |
|---|---|---|---|
| | | | ➢ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳ ಕುರಿತು ತನಿಖೆಯಲ್ಲಿ ಉಪಯೋಗವಾಗುವ ಅಂಶಗಳಿಗೆ ಸಂಬಂಧಿಸಿದಂತೆ ನಿರ್ಧಿಷ್ಟ ಕಾರ್ಯ ವಿಧಾನವನ್ನು ಸಿದ್ದಪಡಿಸಿ, ಎಲ್ಲಾ ಘಟಕಾಧಿಕಾರಿಗಳಿಗೆ ಕಳುಹಿಸಲಾಗಿರುತ್ತದೆ.<br>➢ ಬೆಂಗಳೂರು ನಗರದಲ್ಲಿ ಮಹಿಳೆಯರ ರಕ್ಷಣೆಗಾಗಿ, ಮಹಿಳಾ ಸಹಾಯವಾಣಿ 1091, 22943225 ಕಾರ್ಯ ನಿರ್ವಹಿಸುತ್ತಿದ್ದು, ಸ್ಪಂದನ ಸಹಾಯವಾಣಿಯು ಸಹ ಸ್ಥಾಪಿಸಿ ಕಾರ್ಯನಿರ್ವಹಿಸಲಾಗುತ್ತಿದೆ.<br>➢ ಬೆಂಗಳೂರು ನಗರ ಮತ್ತು ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಮಹಿಳೆಯರ ದೂರು ವಿಚಾರಣೆ ಬಗ್ಗೆ ಪ್ರತ್ಯೇಕವಾಗಿ ಮಹಿಳಾ ಹೆಲ್ಪ್ ಡೆಸ್ಕ್ ಸ್ಥಾಪಿಸಲಾಗಿದೆ.<br>➢ ದಿನದ 24 ಗಂಟೆಯೂ ಸಹ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ "ಪಿಂಕ್ ಹೊಯ್ಸಳ" ಮತ್ತು 112 ಗಸ್ತುವಾಹನ ಗಸ್ತು ಕಾರ್ಯ ನಿರ್ವಹಿಸುತ್ತಿವೆ.<br>➢ ರಾಜ್ಯದ ಇತರೆ ಜಿಲ್ಲೆಗಳಾದ ಬಾಗಲಕೋಟೆ ಜಿಲ್ಲೆಯಲ್ಲಿ ಚನ್ನಮ್ಮ ಪಡೆ, ಬಳ್ಳಾರಿ ಜಿಲ್ಲೆಯಲ್ಲಿ ಓಬವ್ವ ಪಡೆ, ದಾವಣಗೆರೆ ಜಿಲ್ಲೆಯಲ್ಲಿ ದುರ್ಗಾ ಪಡೆ, ಗದಗ ಜಿಲ್ಲೆಯಲ್ಲಿ ಚನ್ನಮ್ಮ ಪಡೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಶರಾವತಿ ಓಬ್ಬವ್ವ ಪಡೆ, ಬೀದರ್ ಜಿಲ್ಲೆಯಲ್ಲಿ ರಾಣಿ ಚನ್ನಮ್ಮ ವಾಹನವು ಹೆಚ್ಚಾಗಿ ಮಹಿಳೆಯರು ಓಡಾಡುವ ಜನನಿಬೀಡ ಸ್ಥಳಗಳಲ್ಲಿ ಹಾಗೂ ಶಾಲಾ ಕಾಲೇಜುಗಳ ಬಳಿ ಹೆಚ್ಚಿನ ಗಸ್ತು ಕಾರ್ಯವನ್ನು ನಿರ್ವಹಿಸುತ್ತಿರುತ್ತದೆ.<br>➢ ಮಹಿಳೆಯರು ಕರ್ತವ್ಯ ನಿರ್ವಹಿಸುವ ಎಲ್ಲಾ ಕಛೇರಿಗಳು, ಸಂಸ್ಥೆಗಳು, ಕಾರ್ಖಾನೆಗಳಲ್ಲಿ ವಿಶೇಷವಾಗಿ ಸುರಕ್ಷತೆಯ ಬಗ್ಗೆ ಮಹಿಳಾ ಸೆಕ್ಯೂರಿಟಿಗಳನ್ನು ನಿಯೋಜಿಸುವಂತೆ ಸೂಚಿಸಲಾಗಿದೆ.<br>➢ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳನ್ನು ಶೀಘ್ರವಾಗಿ ಬಂಧಿಸಿ ಆರೋಪಿಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗುತ್ತಿದೆ.<br>➢ ಹಗಲು ಮತ್ತು ರಾತ್ರಿ ವೇಳೆಯಲ್ಲಿ ಕೆಲಸಕ್ಕೆ ಹೋಗುವ ಮಹಿಳೆಯರ ಸುರಕ್ಷತೆಗೆ ಸಕಲ ಮುನ್ನೆಚ್ಚರಿಕೆ ವಹಿಸುವಂತೆ ಸಂಬಂಧಪಟ್ಟ ಕಂಪನಿಗಳು, ಕಾಲ್ ಸೆಂಟರ್‌ಗಳ, ಪಿಜಿ ಸೆಂಟರ್‌ಗಳ ಮಾಲೀಕರಿಗೆ/ವ್ಯವಸ್ಥಾಪಕರಿಗೆ ಸಲಹೆ, ಸೂಚನೆಗಳನ್ನು ನೀಡಲಾಗುತ್ತಿದೆ.<br>➢ ಮಹಿಳೆಯರು ಓಡಾಡುವ ಸ್ಥಳಗಳ ಬಳಿ, ಬಸ್ ನಿಲ್ದಾಣದಲ್ಲಿ, ಶಾಲಾ ಕಾಲೇಜ್‌ಗಳ ಬಳಿ ಸಿಬ್ಬಂದಿಗಳನ್ನು ಪಾಯಿಂಟ್ ಕರ್ತವ್ಯಕ್ಕೆ ನೇಮಕ ಮಾಡಲಾಗುತ್ತಿದ್ದು, ಸದರಿ ಸ್ಥಳಗಳ ಬಳಿ ಹೊಯ್ಸಳ ಹಾಗೂ ಚೀತಾ ವಾಹನಗಳನ್ನು ಗಸ್ತು ಮಾಡಿ ಇಂತಹ ಕೃತ್ಯಗಳು ನಡೆಯದಂತೆ ಸೂಕ್ತ ಮುನ್ನೆಚ್ಚರಿಕೆಯನ್ನು ಕೈಗೊಳ್ಳಲಾಗಿದೆ.<br>➢ ಮಹಿಳೆಯರ ಸರಗಳ್ಳತನ ತಡೆಗಟ್ಟುವ ಸಲುವಾಗಿ, ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಮುಂಜಾಗ್ರತಾ ಕ್ರಮವಾಗಿ, ಪ್ರಮುಖ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ ಹಾಗು ಈ |

| | | |
|---|---|---|
| | | ಸಂಬಂಧ ಕರಪತ್ರಗಳು ಹಾಗು ಪೋಸ್ಟರ್‌ಗಳ ಮೂಲಕ ಮಹಿಳೆಯರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.<br>➢ ಮಹಿಳೆಯರು ಮತ್ತು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುವ ಕಛೇರಿಗಳಲ್ಲಿ ಆಂತರಿಕ ದೂರು ನಿರ್ವಹಣಾ ಸಮಿತಿಯನ್ನು ರಚಿಸಲಾಗಿರುತ್ತದೆ.<br>➢ ಸಂಕಷ್ಟದಲ್ಲಿರುವ/ತೊಂದರೆಯಲ್ಲಿರುವ ಮಹಿಳೆಯ ಸಹಾಯ ಹಾಗೂ ಸುರಕ್ಷೆಗಾಗಿ ಮಹಿಳೆ ಸುರಕ್ಷಾ ಆ್ಯಪ್ ಅನ್ನು ಪರಿಚಯಿಸಲಾಗಿದೆ. ಈ ಮಹಿಳಾ ಸುರಕ್ಷಾ ಆ್ಯಪ್ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.<br>➢ ಸದರಿ ವಿಶೇಷ ಪಡೆಗಳಲ್ಲಿ ವಿಶೇಷವಾಗಿ ಮಹಿಳಾ ಪೋಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿದ್ದು ಅವರುಗಳಿಂದ ಎಲ್ಲಾ ಶಾಲಾ/ಕಾಲೇಜುಗಳ ಹತ್ತಿರ ಮತ್ತು ಮಹಿಳೆಯರು & ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಪ್ರದೇಶಗಳು ಹಾಗೂ ಜನನಿಬಿಡ ಸ್ಥಳಗಳಲ್ಲಿ ವಿಶೇಷ ಗಸ್ತು ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.<br>➢ ಸದರಿ ಸಿಬ್ಬಂದಿ ರವರು ತೆರೆದ ಮನೆ ಯೋಜನೆಯ ಮೂಲಕ ಮಕ್ಕಳಿಗಾಗಿ ಹಾಗು ಜನ ಸಂಪರ್ಕ ಸಭೆಯ ಮೂಲಕ ಮಹಿಳೆಯರಿಗೆ ಸ್ವಯಂ ರಕ್ಷಣೆಯ ಬಗ್ಗೆ ಕರಾಟೆ ಮತ್ತು ಕೆಲವು ಕೌಶಲ್ಯಗಳ ಬಗ್ಗೆ ಪ್ರಾತ್ಯಕ್ಷಿಕೆಯ ಮೂಲಕ ಜಾಗೃತಿ ಮೂಡಿಸಲಾಗುತ್ತಿರುತ್ತದೆ.<br>➢ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಬೆಂಗಳೂರು ನಗರದಲ್ಲಿ "ವೀರವನಿತೆ" ತಂಡವನ್ನು ರಚಿಸಿ, ಸದರಿಯವರಿಗೆ 6 ತಿಂಗಳು ನುರಿತ ತಜ್ಞರಲ್ಲಿ ಸ್ವಯಂ ರಕ್ಷಣೆ ಮತ್ತು ಮಾರ್ಷಿಯಲ್ ಆರ್ಟ್ಸ್ ಬಗ್ಗೆ ತರಬೇತಿ ನೀಡಿ, ನಂತರ ಸದರಿ ಯವರುಗಳನ್ನು 3 ತಂಡಗಳನ್ನಾಗಿ ರಚಿಸಿ ಮೇಲಾಧಿಕಾರಿಗಳ ನೇತೃತ್ವದಲ್ಲಿ ನಗರದ ವಿವಿಧ ಶಾಲಾ-ಕಾಲೇಜುಗಳು ಮತ್ತು ಮಹಿಳೆಯರು ಹೆಚ್ಚಾಗಿ ಕೆಲಸ ನಿರ್ವಹಿಸುವ ಗಾರ್ಮೆಂಟ್ಸ್‌ಗಳು, ಮಾಲ್ ಮತ್ತಿತರ ಕಡೆಗಳಲ್ಲಿ ಸದರಿಯವರುಗಳಿಗೆ ಸ್ವಯಂ ರಕ್ಷಣೆಯ ಬಗ್ಗೆ ಮಾಹಿತಿ ಹಾಗೂ ತರಬೇತಿಗಳನ್ನು ನೀಡಲಾಗಿರುತ್ತದೆ. |

HD 28 SDN 2021

(ಅರಗ ಜ್ಞಾನೇಂದ್ರ)
ಗೃಹ ಸಚಿವರು